ಆರವತ್ತು ಸಾವಿರ ಇರಬೇಕು. ಹಾಗೂ ಅಲ್ಲಿ ಸಫಿಶಿಯಂಟ್ ಕೇಸಸ್ ಆಫ್ ಕ್ರೈಮ್ ರಿಪೋರ್ಟ್ ಆಗಬೇಕು. ಆದರೆ ಮಾದಾಪುರದಲ್ಲಿ ಈಗಾಗಲೇ ಹೊರ ಪೋಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿದೆ. ಅದು ಸರಿ ಇದೆ. ಅಲ್ಲಿ ಹೆಚ್ಚು ಕ್ರೈಮ್ ರಿಪೋರ್ಟ್‌ಗಳು ಬರಲಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು 1992-93ನೇ ಸಾಲಿನ ಕ್ರೈಮ್ ರಿಪೋರ್ಟ್ ಕೇಳಿದ್ದಾರೆ. ಅದನ್ನು ನಾಳೆ ಬೆಳಿಗ್ಗೆ ಅವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಅಲ್ಲಿ ಕಡಿಮೆ ಕೇಸಸ್ ದಾಖಲೆಯಾಗಿದೆ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿದ್ದ ಹಾಗೆ ಕಳೆದ ಒಂದು ವರ್ಷದಲ್ಲೇ ಐದು ಕೊಲೆಗಳು ಆಗಿದೆ. ಮತ್ತು ಅದರ ಜೊತೆಗೆ ಗಾಂಜಾ ಬೆಳೆಸುವುದೂ ಕೂಡ ಮಾದಾಪುರದಲ್ಲಿ ನಡೆಯುತ್ತಿದೆ. ಮಾದಾಪುರ ಹೊರವಲಯ ಠಾಣೆಯಲ್ಲಿ ಒಬ್ಬರು ಹೆಡ್ ಕಾನ್ಸ್‌ಟೇಬಲ್ ಮತ್ತು ಎರಡು ಪೋಲೀಸ್ ಕಾನ್ಸ್‌ಟೇಬಲ್ ಇದ್ದಾರೆ. ಆದಕಾರಣ ಅಲ್ಲಿ ಒಂದು ಠಾಣೆಯನ್ನು ತೆರೆಯಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ನಾನು ಬೆಳಿಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಮಾನ್ಯ ಸದಸ್ಯರನ್ನು ನನ್ನ ಕಛೇರಿಗೆ ಕರೆಯಿಸಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಆ ತರಹ ಅಲ್ಲಿ ಆಗಿದ್ದರೆ, ಅವರು ಬೇಕೇ ಬೇಕು ಎಂದರೆ ಅವರ ರಿಕ್ವೆಸ್ಟ್ ಕನ್ಸಿಡರ್ ಮಾಡುತ್ತೇನೆ.

ಹಾಸನದಲ್ಲಿ ಹೊಸ ಜಿಲ್ಲಾ ಕಾರಾಗೃಹ

393 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಜಿಲ್ಲಾ ಕಾರಾಗೃಹದ ತುಂಬಾ ಚಿಕ್ಕದಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬದಲಿ ವ್ಯವಸ್ಥೆಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ಹೌದು

ಆ) ಹೊಸ ಕಾರಾಗೃಹವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ. ಹೊಸ ಕಾರಾಗೃಹವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನನ್ನದು ಮೂರು ಉಪ ಪ್ರಶ್ನೆಗಳು ಇವೆ. ಪರಿಶೀಲನೆ ಯಾವ ಹಂತದಲ್ಲಿ ಇದೆ? ಯಾವ ಯಾವ ವಿಷಯಗಳಲ್ಲಿ ಪರಿಶೀಲನೆ ನಡೆಯುತ್ತಿದೆ? ಪರಿಶೀಲನೆ ಎಷ್ಟು ವರ್ಷದಲ್ಲಿ ಮುಗಿಯಬಹುದು?

ಶ್ರೀ ಆರ್. ರೋಷನ್ ಬೇಗ್ : ಹಾಸನ ಜಿಲ್ಲೆಯಲ್ಲಿ ಈಗ ಇರತಕ್ಕಂಥ ಜಿಲ್ಲಾ ಕಾರಾಗೃಹ 1879ರಲ್ಲಿ ಎರಡು ಎಕರೆ ಹತ್ತೊಂಭತ್ತು ಗುಂಟೆಯಲ್ಲಿ ನಿರ್ಮಾಣ ಆಗಿದೆ. ಅದು ಚಿಕ್ಕದು ಎಂದು ಮನಗಂಡು ಈಗಾಗಲೇ ಸರ್ಕಾರ ಸರ್ವೆ ನಂಬರ್ 88,122ರಲ್ಲಿ, ಸರ್ವೆ ನಂಬರ್ 3ರಲ್ಲಿ ಒಂಭತ್ತು ಎಕರೆ ಏಳು ಗುಂಟೆ ಜಮೀನನ್ನು ಮಂಜೂರಾತಿ ಮಾಡಿ ನಮ್ಮ ಇಲಾಖೆಯವರಿಗೆ ವಹಿಸಿಕೊಟ್ಟಿದ್ದಾರೆ. ಈಗ ಸರ್ಕಾರ ಕೊಟ್ಟಿರತಕ್ಕಂಥ ಭೂಮಿಯ ಮಧ್ಯದಲ್ಲಿ ಖಾಸಗಿ ವ್ಯಕ್ತಿಗಳ ಭೂಮಿ ಐದು ಎಕರೆ ಒಂಭತ್ತು ಗುಂಟೆ ಜಮೀನು ಬಂದಿವುದರಿಂದ ಅದನ್ನು ಈಗಾಗಲೇ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಪ್ರಾಯಶಃ ತಕ್ಷಣದಲ್ಲಿ ಈ ಹಾಸನ ಜಿಲ್ಲಾ ಕಾರಾಗೃಹ ಚಿಕ್ಕದು ಎಂದು ಮನಗಂಡು ಸ್ಥಳಾಂತರಿಸುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಈ 9 ಎಕರೆ 7 ಗುಂಟೆ ಮತ್ತು 5 ಎಕರೆ ಒಂಭತ್ತು ಗುಂಟೆ ಒಟ್ಟು 14 ಎಕರೆಯಲ್ಲಿ ಒಂದು ಹೊಸ ಕಾರಾಗೃಹವನ್ನು ಕಟ್ಟುವುದಕ್ಕೆ ಸರ್ಕಾರದ ಮಂಜೂರಾತಿ ದೊರೆತಿದೆ. ಲೋಕೋಪಯೋಗಿ ಇಲಾಖೆ ಭೂ ಸ್ವಾಧೀನ ಪ್ರಕ್ರಿಯೆ ಮಾಡಿ ಕಾರ್ಯಕ್ರಮವನ್ನು ಜರುಗಿಸಿ ನಮ್ಮ ಇಲಾಖೆಗೆ ಕೊಡುತ್ತಾರೆ. ತಕ್ಷಣ ಕಾರಾಗೃಹವನ್ನು ಕಟ್ಟುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಬೆಂಗಳೂರಿನಲ್ಲಿ ಒಂದಂಕಿ ಲಾಟರಿ ತಡೆಗಟ್ಟುವುದು

394 - ಶ್ರೀ ಪ್ರಕಾಶ್ ಪಿ.ಎಸ್ (ಚಿಕ್ಕಪೇಟೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮಟ್ಕ ಜೂಜು ಹಾಗೂ ಒಂದಂಕಿ ಲಾಟರಿಯ ಹಾವಳಿ ಪುನಃ ತಲೆಯೆತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮ ಏನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬಂದಿದೆ

ಆ) ಬೆಂಗಳೂರು ನಗರದಲ್ಲಿ ಕೆಲವು ಕ್ಲಬ್ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಿಂದ ಪೋಲೀಸರ ದಾಳಿ ಮಾಡದಂತೆ ತಡೆಯಾಜ್ಞೆ ತಂದು ಕ್ಲಬ್‌ಗಳನ್ನು ನಡೆಸುತ್ತಿರುತ್ತಾರೆ. ಆದರೆ ಯಾವುದೇ ರೀತಿಯ ಜೂಜು ನಡೆಯದಂತೆ ನಿಗಾ ವಹಿಸಲಾಗಿದೆ. ಇದರಿಂದ ಜೂಜು ಹಾಗೂ ಮಟ್ಕಾ ಪ್ರಕರಣಗಳು ನಿಯಂತ್ರಣದಲ್ಲಿರುತ್ತದೆ.

ನಗರದಲ್ಲಿ ಒಂದಂಕಿ ಹಾಗೂ ಇನ್‌ಸ್ಟೆಂಟ್ ಲಾಟರಿ ಮಾರಾಟವನ್ನು ಸಂಪೂರ್ಣವಾಗಿ ನಿಷ್ಕೇಧಿಸಿದೆ. ಆದರೆ ಇತ್ತೀಚೆಗೆ ಹಲವು ಏಜೆಂಟರುಗಳು, ಪೊಲೀಸರು ಮಧ್ಯೆ ಪ್ರವೇಶಿಸದಂತೆ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ಅವುಗಳ ಬಗ್ಗೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಪರಿಶೀಲನೆ ನಡೆಯುತ್ತಿದೆ.